**ಮೂ.ದಾ.ನಂ.110/2017**

ಡಿ.ಡಬ್ಲ್ಯು.1

(ಇಂದು ದಿನಾಂಕ **24-06-2024** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ.ಎಮ್.ಎನ್.ಎಸ್. ವಕೀಲರಿಂದಃ**

ಭೂಮಾಪಕರು ನಮ್ಮ ಜಾಗವನ್ನು ಆಳತೆ ಮಾಡಿದ ಬಗ್ಗೆ ನಾನು ದಾಖಲಾತಿಗಳನ್ನು ಪಡೆದುಕೊಂಡು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿದ ನಕಾಶೆಗೆ ವಾದಿಯು ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದ್ರಿ ನಕಾಶೆಯ ವಿರುದ್ಧ ವಾದಿಯು A.D.L.R, Kumta ಇಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. **ಸರ್ವೆ ನಂ.744 ಹಿಸ್ಸಾ 1** ದಾವಾ ಸ್ಥಳವು ವಾದಿಯ ತಂದೆಗೆ ಭೂ-ನ್ಯಾಯ ಮಂಡಳಿಯಿಂದ ಮಂಜೂರಾಗಿದೆ ಎಂದರೆ ಸರಿ. ವಾದಿಯು ತನ್ನ ತಂದೆಗೆ ಮಂಜೂರಾದ ಸಮಯದಿಂದಲೂ ದಾವಾ ಸ್ಥಳದಲ್ಲಿ ವಾಸ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಅವರು ಸುಮಾರು 15 ವರ್ಷದಿಂದ ವಾಸ ಮಾಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು 45 ವರ್ಷಗಳಿಂದ ದಾವಾ ಅಸ್ತಿಯಲ್ಲಿ ವಾಸವಾಗಿದ್ದು, ನಂತರ ನಾವು ಸದ್ರಿ ಜಾಗಕ್ಕೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಾವೇ ಮೊದಲು ಮನೆಯನ್ನು ಕಟ್ಟಿಕೊಂಡಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು 45 ವರ್ಷಗಳಿಂದ ಭಾಗಾಯತು ಆಗಿ ಸದ್ರಿ ದಾವಾ ಸ್ಥಳವವನ್ನು ಅಭಿವೃದ್ಧಿ ಮಾಡಿ ಅದರ ಸುತ್ತಲೂ ಬೇಲಿಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಮ್ಮ **ಸರ್ವೆ ನಂ. 745 ಹಿಸ್ಸಾ 1** ರಲ್ಲಿ ಮಣ್ಣು ತುಂಬಿ ವಾದಿಯರ ಜಾಗದ ಗಡಿಯವರೆಗೆ ನಮ್ಮ ಮನೆಯ ಗೋಡೆಯನ್ನು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ವಾದಿಯರ ಜಾಗದಗಡಿಯವರೆಗೆ ನಮ್ಮ ಮನೆಯ

ಗೋಡೆಯನ್ನು ಕಟ್ಟಿ ವಾದಿಯರ ಜಾಗವನ್ನು ಅತೀಕ್ರಮಣ ಮಾಡುವ ಹೊಂಚು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ **ಸರ್ವೆ ನಂ.745 ಹಿಸ್ಸಾ 1** ಹಾಗೂ ದಾವಾ ಸ್ಥಳದ ಮಧ್ಯದಲ್ಲಿ ಭೂಮಾಪಕರು ಹಾಕಿದ ಗಡಿ ಕಲ್ಲು ಇದೆ ಎಂದರೆ ಸರಿಯಲ್ಲ. ನಮ್ಮ ಹಾಗೂ ವಾದಿಯರ ಜಾಗದಲ್ಲಿ ಗಡಿ ಕಲ್ಲು ಇದ್ದು, ಆ ಗಡಿಕಲ್ಲುಗೆ ಅನುಸಾರವಾಗಿ ವಾದಿಯರು ಬೇಲಿಯನ್ನು ನಿರ್ಮಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಸರ್ವೆ ನಂ.744 ಹಿಸ್ಸಾ 1 ರ** ವಾದಿಯ ಜಾಗದ ಉತ್ತರಕ್ಕೆ ಗಾಂವಕರ ಇವರಿಗೆ ಸೇರಿದ ಜಾಗ ಇದೆ ಎಂದರೆ ಸರಿ. ವಾದಿಯ ಜಾಗದ ಪಶ್ಚಿಮಕ್ಕೆ ನಮ್ಮ **ಸರ್ವೆ ನಂ. 745 ಹಿಸ್ಸಾ 1** ರ ಜಾಗ ಇದೆ ಎಂದರೆ ಸರಿ. ನಮ್ಮ ಜಾಗಾಕ್ಕೆ ಉತ್ತರ ದಿಕ್ಕಿನಲ್ಲಿ ಶ್ರೀಧರ ಭಟ್ಟ ಇವರಿಗೆ ಸೇರಿದ **ಸರ್ವೆ ನಂ.748** ರ ಜಾಗ ಇದೆ ಎಂದರೆ ಸರಿ. ಹಾತ್ ನಕಾಶೆಯಲ್ಲಿ ತೋರಿಸಿದಂತೆ ನಮ್ಮ ಹಾಗೂ ವಾದಿಯರ ಜಾಗದ ನಡುವೆ ಇದ್ದ ಬೇಲಿಯು ಹಾಗೇ ಮುಂದುವರಿದು ಉತ್ತರ ದಿಕ್ಕಿನಲ್ಲಿ ಇರುವ ಗಾಂವಕರ ಇವರ ಜಾಗದ ಗಡಿಯವರೆಗೆ ಬೇಲಿ ಇದೆ ಎಂದರೆ ಸಾಕ್ಷಿಯು ಮೊದಲು ಬೇಲಿ ಇರಲಿಲ್ಲ ಈಗ 5-6 ವರ್ಷಗಳಿಂದ ಬೇಲಿಯನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಬೇಲಿಯು 45 ವರ್ಷಗಳಿಂದ ಇದ್ದು, ನಾನು ಈಗ 5-6 ವರ್ಷಗಳಿಂದ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಾಗವನ್ನು ಆಳತೆ ಮಾಡುವ ಪೂರ್ವದಲ್ಲಿ ನಾನು ಹಾಗೂ ನನ್ನ ಮಕ್ಕಳು ಸೇರಿ ವಾದಿ ಹಾಗೂ ನಮ್ಮ ಜಾಗದ ಗಡಿಯಲ್ಲಿ ಇರುವ ಬೇಲಿಯನ್ನು ಕಡಿದು ಹಾಕಿದ್ದೇವೆ ಎಂದರೆ ಸರಿಯಲ್ಲ. ಆ ರೀತಿ ಬೇಲಿಯನ್ನು ಕಡಿದು ವಾದಿಯರ ಜಾಗವನ್ನು ಅತೀಕ್ರಮಿಸಿಕೊಂಡು ಪಾಗಾರವನ್ನು ಕಟ್ಟಲು ಪ್ರಯತ್ನಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಈ ಸಮಯದಲ್ಲಿ ವಾದಿಯರು ಪೊಲೀಸರಿಗೆ ದೂರು ನೀಡಿದ್ದರಿಂದ ಪೊಲೀಸರು ಜಾಗಕ್ಕೆ ಬಂದಿದ್ದರು ಎಂದರೆ ಸರಿ. ದಾವಾ ಸ್ಥಳದ ಗಡಿಯಲ್ಲಿರುವ ಬೇಲಿಯನ್ನು ಕಡಿದು ಹಾಕಿ ವಾದಿಯ ಕಬ್ಜಾ

ವಹಿವಾಟಿಗೆ ಅಡ್ಡಿ ಆತಂಕವನ್ನು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಭೂಮಾಪಕರಿಗೆ ಆಮಿಷವನ್ನು ಒಡ್ಡಿ ನಮಗೆ ಬೇಕಾದ ರೀತಿಯಲ್ಲಿ ನಾವು ನಕ್ಷೆಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಮ್ಮ **ಸರ್ವೆ ನಂ. 745 ಹಿಸ್ಸಾ 1 ರಲ್ಲಿ** ಒಂದು ಗುಂಟೆ ಖರಾಬ ಜಾಗೆ ಇದೆ ಎಂದರೆ ಸರಿ. ಸದ್ರಿ ರಸ್ತೆ ಹಾಗೂ ನೀರಿನ ಕಾಲುವೆ ಸಲುವಾಗಿ ಖರಾಬ ಜಾಗೆ ಇದೆ ಎಂದರೆ ಸರಿ. ನಾವು ಮನೆಯನ್ನು ಕಟ್ಟುತ್ತಿರುವಾಗ ಸದ್ರಿ ಜಾಗದಲ್ಲಿದ್ದ ನೀರಿನ ಕಾಲುವೆಯನ್ನು ಮುಚ್ಚಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಭೂಮಾಪಕರು ನಮ್ಮ ಜಾಗದ ವಸ್ತು ಸ್ಥಿತಿಯನ್ನು ತಿಳಿಸದೇ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಕೇಳಿದ ಎದುರು ದಾವಾ ಮಾಗಣಿಯನ್ನು ಸದ್ರಿ ನಕಾಶೆಯ ಮೇಲಿಂದ ಪಡೆಯಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ. ನಾವು ವಾದಿಯರ ಕಬ್ಜಾ ಹಾಗೂ ವಹಿವಾಟಿಗೆ ತೊಂದರೆ ನೀಡಿದ್ದರಿಂದ ವಾದಿಯು ಈ ದಾವೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ